ಅಧ್ಯಕ್ಷರು: ಸಚಿವರು ಇದನ್ನು ಗಮನಿಸಬೇಕು. ಬಿಜೆಪಿ ಶಾಸಕರು ಆರಿಸಿಬಂದಿರುವ ಕಡೆ ಮಸೀದಿ ರಿಪೇರಿಗೆಂದು ಹಣ ಕೇಳುತ್ತಿದ್ದಾರೆ, ಇದು ಆರೋಗ್ಯಕರವಾದ ಬೆಳವಣಿಗೆ. ತಕ್ಷಣ ಆದ್ಯತೆ ಕೊಟ್ಟು ಇದನ್ನು ಮಾಡಿಸಬೇಕು.

ಶ್ರೀ ಜೆ ಎಚ್ ಪಟೇಲ್: ಮಸೀದಿಗಳ ಬಗ್ಗೆ ಬಿಜೆಪಿ ಸದಸ್ಯರು ಏನು ಸಹಾಯ ಎಷ್ಟು ಸಹಾಯ ಬೇಕೆಂದು ಕೇಳುತ್ತಾರೋ ಅಷ್ಟೂ ಮಾಡುತ್ತೇವೆ. ಮಸೀದಿ ಕಟ್ಟುವ ವಿಷಯದಲ್ಲಿ ಇವರು ನಮಗೆ ಪತ್ರ ಬರೆಯಲಿ. ನಾವು ಸಹಾಯಕ್ಕೆ ಸಿದ್ಧರಿದ್ದೇವೆ.

ಶ್ರೀ ಕೆ ಎಸ್ ಈಶ್ವರಪ್ಪ: ಮುಖ್ಯಮಂತ್ರಿಗೇನೋ ಹೀಗೆ ಹೇಳುತ್ತಿದ್ದಾರೆ. ಆದರೆ ನನ್ನ ಶಿವಮೊಗ್ಗ ಕ್ಷೇತ್ರದ ಮಸೀದಿಗಳ ಬಗ್ಗೆ ನಾನು ಪತ್ರ ಬರೆದು ತಿಂಗಳುಗಳೇ ಕಳೆದಿವೆ ಆದರೆ ಇವತ್ತಿನವರೆಗೂ ಏನೂ ಧನಸಹಾಯ ಮಾಡಿಲ್ಲ. ಇಲ್ಲಿ ಈಗ ಪ್ರಶ್ನೆ ಇರುವುದು ಮಸೀದಿಗಳ ವಿಷಯದಲ್ಲಿ ಸರ್ಕಾರ ರಾಜಕೀಯ ದುರ್ಲಾಭ ಪಡೆದುಕೊಳ್ಳುತ್ತಿದೆ ಎಂಬುದು.

ಅಧ್ಯಕ್ಷರು: ಈಶ್ವರಪ್ಪನವರೇ, ಮುಖ್ಯಮಂತ್ರಿಗಳ ಮಾತನ್ನು ನೀವು ಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳಬೇಕು ಅವರು ಹೇಳಿದ್ದು ಮಸೀದಿ ಕಟ್ಟುವ ವಿಚಾರದಲ್ಲಿ ಸಹಾಯ ಮಾಡಲು ಸಿದ್ಧ ಎಂದು.

-(ಮುಂದಲ)-

ಶ್ರೀ ಸಿ. ಆರ್. ಸಗೀರ್ ಅಹಮ್ಮದ್: ಈ ರಾಷ್ಟ್ರದಲ್ಲಿರುವ ಮುಸ್ಲಿಮರ ರಕ್ಷಣೆ ಮಾಡಬೇಕಾದ್ದು ಬಿಜೆಪಿ ಜನತಾದಳ ಅಷ್ಟೇ ಅಲ್ಲ ಕಾಂಗ್ರೆಸ್‌ನವರೂ ಸೇರಿದಂತೆ ಎಲ್ಲಾ ಪಕ್ಷಗಳ ಕರ್ತವ್ಯ. ಸರ್ಕಾರ ಮಸೀದಿಗಳ ರಿಪೇರಿ ಬಗ್ಗೆ ಕೂಡಲೇ ಗಮನಹರಿಸಿ ಹಣ ಬಿಡುಗಡೆ ಮಾಡಬೇಕು. ಇನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು ಮಸೀದಿಗಳ ವಿಚಾರದಲ್ಲಿ ಎಷ್ಟೇ ಹಣ ಬೇಕಾದರೂ ಕೊಡಲು ಸರ್ಕಾರ ಸಿದ್ಧವಿದೆ ಎಂದು. ನಾನು ಒಂದು ವಿಚಾರವನ್ನು ಅವರ ಗಮನಕ್ಕೆ ತರಬಯಸುತ್ತೇನೆ. ಈ ಸಾಲಿಗೆ ವಕ್ಫ್ ಮಂಡಲಿಗೆ ಸರ್ಕಾರ 4.5 ಕೋಟಿ ಹಣ ಬಿಡುಗಡೆ ಮಾಡುವುದಾಗಿ ತಿಳಿಸಿತ್ತು ಆದರೆ ಇದುವರೆಗೂ ಬಿಡುಗಡೆಯಾಗಿರುವುದು ಕೇವಲ 50 ಲಕ್ಷ ರೂ ಮಾತ್ರ ಆದ್ದರಿಂದ ಉಳಿದ ಹಣವನ್ನು ಕೂಡಲೇ ಸರ್ಕಾರ ಬಿಡುಗಡೆ ಮಾಡಬೇಕೆಂದು ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

-(ಮುಂದಲ)-

ಶ್ರೀ ಜೆ ಹೆಚ್ ಪಟೇಲ್: ಹಣ ಬಿಡುಗಡೆ ಮಾಡುತ್ತೇವೆಂದು ಆಗಲೇ ಹೇಳಿದ್ದೇವೆ. ವಕ್ಫ್ ಮಂಡಲಿಗೂ ಬಿಡುಗಡೆ ಮಾಡುತ್ತೇವೆ. ಆದರೆ ನನಗೆ ಆಶ್ಚರ್ಯವಾಗುವುದೇನೆಂದರೆ ಮಸೀದಿ ವಿಷಯ ಬಂದ ತಕ್ಷಣ ಬಿಜೆಪಿ ಸದಸ್ಯರಿಗೆ ಏಕೆ ಇಷ್ಟು ಟೆನ್‌ಶನ್?

ಅಧ್ಯಕ್ಷರು: ಈಗ ಮುಂದಿನ ಪ್ರಶ್ನೆ.

ಶಿಡ್ಲಘಟ್ಟ ತಾಲ್ಲೂಕಿನ ದಿಬ್ಬೂರ ಹಳ್ಳಿ ಪೋಲಿಸ್ ಠಾಣೆಯಲ್ಲಿ ದಾಖಲಾಗಿರುವ ಕ್ರಿಮಿನಲ್ ಮೊಕದ್ದಮೆಗಳು.

63 (435) ಶ್ರೀ.ಹೆಚ್.ಶಿವಪ್ಪ (ಹರಿಹರ):

ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಆನೆ ಮೊಡಗು ಗ್ರಾಮವು ಶಿಡ್ಲಘಟ್ಟದ ವ್ಯಾಪ್ತಿಯಲ್ಲಿದೆಯೇ:
(ಆ) ಈ ಗ್ರಾಮಕ್ಕೆ ಒಳಪಟ್ಟಿರುವ ದಿಬ್ಬೂರಹಳ್ಳಿ ಪೋಲೀಸ್ ಠಾಣೆಯಲ್ಲಿ ಕಳೆದ ಹತ್ತು ವರ್ಷಗಳಿಂದ ಎಷ್ಟೆಷ್ಟು ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿದೆ? ವರ್ಷವಾರು ಎಷ್ಟೆಷ್ಟು ದಾಖಲೆಗಳು ಅಂಗೀಕಾರವಾಗಿದೆ? (ವರ್ಷವಾರು ಅಂಕಿ ಅಂಶಗಳನ್ನು ಒದಗಿಸುವುದು).
(ಇ) 1. 1990 ರಿಂದ 1995 ರವರೆಗೆ ಅತಿ ಹೆಚ್ಚು ಕೇಸುಗಳು ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2. ಅದಕ್ಕೆ ಕಾರಣಗಳೇನು?

ಶ್ರೀ ಆರ್. ರೋಷನ್ ಬೇಗ್ (ಗೃಹ ಮತ್ತು ವಕ್ಫ್ ರಾಜ್ಯ ಸಚಿವರು.)

(ಅ) ಆನೆ ಮೊಡಗು ಗ್ರಾಮವು ಗ್ರಾಮವು ಶಿಡ್ಲಘಟ್ಟ ತಾಲ್ಲೂಕು ವ್ಯಾಪ್ತಿಯಲ್ಲಿದ್ದು, ದಿಬ್ಬೂರಹಳ್ಳಿ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿರುತ್ತದೆ.
(ಆ) ಕಳೆದ ಮತ್ತು ವರ್ಷಗಳಿಂದ ಅನೆಮೊಡಗು ಗ್ರಾಮದಲ್ಲಿ 43 ಕ್ರಿಮಿನಲ್ ಮೊಕದ್ದಮೆಗಳು ವರದಿಯಾಗಿದೆ. ಅವುಗಳ ಅಂಕಿಅಂಶಗಳು ಈ ಕೆಳಗಿನಂತಿದೆ.

1987 --- ಇಲ್ಲಾ
1988 --- 01
1989 --- 02
1990 --- 05
1991 --- 04
1992 --- 06
1993 --- 16
1994 --- ಇಲ್ಲಾ
1995 --- 06
1996 --- 03

(ಇ) (1) ಹೌದು

(2) 1990 ರಿಂದ 1995 ರವರೆಗೆ ಒಟ್ಟು 37 ಕೇಸುಗಳು ದಾಖಲಾಗಿದ್ದು 1989ರ ಚುನಾವಣೆಯ ನಂತರ ಸದರಿ ಗ್ರಾಮದಲ್ಲಿ ಪ್ರಾರಂಭಗೊಂಡ ರಾಜಕೀಯ ವೈಷಮ್ಯದಿಂದಾಗಿ ಗಲಾಟೆಗಳು ಹೆಚ್ಚಾಗಿ ನಡೆಯಲು ಕಾರಣವಾಗಿರುತ್ತದೆ.

SRI H. SHIVAPPA: Sir, the very form of the question has been distorted. This may be answered next time.

Mr. SPEAKER: I agree with you. Please bear with us.

It will be answered next time. We are withholding that question.

ಬಳ್ಳಾರಿ ಜಿಲ್ಲೆಯಲ್ಲಿ ಹೊಸದಾಗಿ ಅಗ್ನಿಶಾಮಕ ಠಾಣೆಗಳನ್ನು ತೆರೆಯುವುದು.

64(439): ಶ್ರೀ. ಆಲಂ ವೀರಭದ್ರಪ್ಪ (ಕುರುಗೋಡು):

ಮಾನ ಸೆರೆಮನೆ, ಗೃಹ ರಕ್ಷಕ ದಳ ಹಾಗೂ ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಬಳ್ಳಾರಿ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಅಗ್ನಿಶಾಮಕ ಠಾಣೆಗಳಿವೆ:

(ಆ) 1996-97ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ತೆರೆಯಲಾಗಿದೆ:

(ಇ) 1997-98ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯ ಯಾವ ಯಾವ ಜಾಗಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ಪ್ರಾರಂಭಿಸಲಾಗುವುದು?

ಶ್ರೀ ವಿ.ಸೋಮಣ್ಣ (ಸೆರೆಮನೆ, ಗೃಹ ರಕ್ಷಕ ದಳ ಹಾಗೂ ಅಗ್ನಿಶಾಮಕ ಸೇವೆಗಳ ರಾಜ್ಯಸಚಿವರು.)

(ಅ) ಬಳ್ಳಾರಿ ಜಿಲ್ಲೆಯ ಈ ಕೆಳಕಾಣಿಸಿರುವ ತಾಲ್ಲೂಕುಗಳಲ್ಲಿ ಅಗ್ನಿಶಾಮಕ ಠಾಣೆಗಳಿವೆ:-

(1) ಬಳ್ಳಾರಿ

(2) ಹೊಸಪೇಟೆ

(3) ಸಂಡೂರು

(4) ಹೂವಿನಹಡಗಲಿ

(5) ಕೂಡ್ಲಿಗಿ

(6) ಶಿರಗುಪ್ಪ ಮತ್ತು

(7) ಹರಪನಹಳ್ಳಿ.

(ಆ) 1996-97ನೇ ಸಾಲಿನಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಈ ಕೆಳಕಾಣಿಸಿರುವ ಸ್ಥಳಗಳಲ್ಲಿ ಹೊಸ